ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 24-01-1978.

# *ನಿರಂತರ ಸೇವಾದಾರಿ*

(निरन्तर सेवाधारी)

**ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ  ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ಸದಾ ಮಹಾದಾನಿ ಮತ್ತು ವರದಾನಿ, ನಿರಂತರ ಯೋಗಿ ಅಥವಾ ನಿರಂತರ ಸೇವಾಧಾರಿಯಾಗಿ ತಯಾರು ಮಾಡುವ, ಕಲ್ಯಾಣಕಾರಿ ಸದ್ಗುರು ಶಿವತಂದೆ ಮಾತನಾಡುತ್ತಿದ್ದಾರೆ.**

ಇಂದು ಬಾಪ್‌ದಾದಾರವರು ಪ್ರತಿಯೊಂದು ಮಕ್ಕಳ ಮಸ್ತಕದ ಮಧ್ಯದಲ್ಲಿ ಹೊಳೆಯುತ್ತಿರುವಂತಹ ನಕ್ಷತ್ರವೆಂದಾದರೂ ಹೇಳಿ ಅಥವಾ ವಜ್ರವೆಂದಾದರೂ ಹೇಳಿ, ಅದನ್ನು ನೋಡುತ್ತಾ ಹರ್ಷಿತವಾಗುತ್ತಿದ್ದಾರೆ. ಪ್ರತಿಯೊಬ್ಬರ ಹೊಳಪು ಭಿನ್ನ ಮತ್ತು ಪ್ರಿಯವಾಗಿತ್ತು. ಈ ಹೊಳೆಯುತ್ತಿರುವ ನಕ್ಷತ್ರಗಳಿಂದ, ಪ್ರತಿಯೊಂದು ಆತ್ಮನ ಅದೃಷ್ಟದ ಗೆರೆಯು ಸ್ಪಷ್ಟವಾಗಿಯೇ ಕಂಡುಬರುತ್ತದೆ. ಬಾಪ್‌ದಾದಾರವರಿಗೆ ಹೆಮ್ಮೆಯಿದೆ - ಅಗಲಿರುವ ಮಕ್ಕಳು ತಮ್ಮ ಭಾಗ್ಯವನ್ನು ರೂಪಿಸಿಕೊಳ್ಳುವುದಕ್ಕಾಗಿ ಎಷ್ಟೊಂದು ಗುಪ್ತ ಮತ್ತು ಪ್ರತ್ಯಕ್ಷವಾಗಿ ಪುರುಷಾರ್ಥವನ್ನು ಯಾವ ರೀತಿ ಮಾಡುತ್ತಿದ್ದಾರೆ! ಮಕ್ಕಳ ನಶೆ ಮತ್ತು ತೀವ್ರ ಪುರುಷಾರ್ಥವನ್ನು ನೋಡುತ್ತಾ, ತಂದೆಯೂ ಸಹ ಮಕ್ಕಳಮೇಲೆ ಅರ್ಪಣೆಯಾಗಿ ಬಿಡುತ್ತಾರೆ. ಅರ್ಥಾತ್ ಮಕ್ಕಳ ಕೊರಳಿನ ಹಾರವಾಗಿ ಬಿಡುತ್ತಾರೆ. ಹೇಗೆ ಹಾರವು ಸದಾ ಕೊರಳಿನಲ್ಲಿ ಪೋಣಿಸಲಾಗಿರುತ್ತದೆಯೋ ಹಾಗೆಯೇ ಮಕ್ಕಳ ಮುಖದಲ್ಲಿ, ನಯನಗಳಲ್ಲಿ, ಬುದ್ಧಿಯಲ್ಲಿ ತಂದೆಯೇ ಸಮಾವೇಶವಾಗಿದ್ದಾರೆ. ಅರ್ಥಾತ್ ತಂದೆಯನ್ನು ತಮ್ಮ ಕೊರಳಿನ ಹಾರವನ್ನಾಗಿ ಮಾಡಿಕೊಂಡಿದ್ದೀರಿ. ಇಂದು ಬಾಪ್‌ದಾದಾರವರು ಮಕ್ಕಳ ಗೀತೆಯನ್ನು ಹಾಡುತ್ತಿದ್ದರು. ಇಂದು ಯಾವ ಗೀತೆಯನ್ನು ಹಾಡಿದರು. ಮಕ್ಕಳ ಮಹಿಮೆಯ ಗೀತೆ, ಪ್ರತಿಯೊಂದು ಮಕ್ಕಳಲ್ಲಿ ತಂದೆಯನ್ನು ಪ್ರತ್ಯಕ್ಷ ಮಾಡುವ ಉಮ್ಮಂಗವನ್ನು ನೋಡಿದರು. ಮಕ್ಕಳ ವಿನಃ ತಂದೆಯ ಪ್ರತ್ಯಕ್ಷತೆಯಾಗಲೂ ಸಹ ಸಾಧ್ಯವಿಲ್ಲ. ಅಂದಮೇಲೆ ತಂದೆಯನ್ನೂ ಪ್ರತ್ಯಕ್ಷಗೊಳಿಸುವಂತಹ ಶ್ರೇಷ್ಠರು ಎಷ್ಟುಮಂದಿ ನೆಲೆಸಿದ್ದಾರೆ? ಸದಾ ಇಷ್ಟು ನಶೆ ಅಥವಾ ಸೇವೆಯ ಸ್ಮೃತಿಯು ಇರಲಿ. ಹೇಗೆ ತಂದೆಯು ಅವಿನಾಶಿಯಾಗಿದ್ದಾರೆ, ಆತ್ಮವು ಅವಿನಾಶಿಯಾಗಿದೆ, ಸಂಗಮಯುಗದ ಸರ್ವಪ್ರಾಪ್ತಿಗಳು

ಅವಿನಾಶಿಯಾಗಿ. ಇದೇ ರೀತಿ ಸ್ಮೃತಿ ಅಥವಾ ನಶೆಯೂ ಅವಿನಾಶಿಯಾಗಿದೆಯೇ? ಅಂತರವಾಗಬಾರದು. ಅಂತರ ಬರುವುದು ಅರ್ಥಾತ್ ಮಂತ್ರವನ್ನು ಮರೆಯುವುದು. ಒಂದು ವೇಳೆ ಮಂತ್ರವು ನೆನಪಿದೆಯೆಂದರೆ ನಶೆಯಲ್ಲಿ ಅಂತರವಾಗಲು ಸಾಧ್ಯವಿಲ್ಲ.

ಇಂದು ಬಾಪ್‌ದಾದಾರವರಂತು ಮಿಲನ ಮಾಡುವುದಕ್ಕಾಗಿ ಬಂದಿದ್ದಾರೆ, ತಿಳಿಸುವುದಂತು ಬಹಳಷ್ಟಿದೆ ಆದರೆ ಇಂದು ತಿಳಿಸಿರುವುದನ್ನು ಸ್ವರೂಪದಲ್ಲಿ ನೋಡುವುದಕ್ಕಾಗಿ ಬಂದಿದ್ದಾರೆ. ಸ್ವರೂಪದಲ್ಲಿ ಏನನ್ನು ನೋಡುತ್ತಿದ್ದಾರೆ? ಸೇವೆಯನ್ನು ಬಹಳ ಚೆನ್ನಾಗಿ ಮಾಡಿದ್ದೀರಿ, ಅನೇಕ ಅಜ್ಞಾನಿ ಆತ್ಮರಿಗೆ ಸ್ಮೃತಿ ಅರ್ಥಾತ್ ಜಾಗೃತಿಯನ್ನು ತರಿಸಿದರು. ದೆಹಲಿಯ ಧರಣಿ ಸರ್ವ ಬ್ರಾಹ್ಮಣ, ಆತ್ಮರನ್ನು ಹಲ್‌ಚಲ್‌ನಲ್ಲಿ ತಂದಿತು. ಈ ಪ್ರಶ್ನೆಯು ಉದ್ಭವಿಸುತ್ತಿದೆ - ಇವರು ಯಾರಾಗಿದ್ದಾರೆ ಮತ್ತು ಇವರ ಕರ್ತವ್ಯವೇನಾಗಿದೆ? ಹೇಗೆ ಮಲಗಿರುವ ಮನುಷ್ಯನ್ನು ಜಾಗೃತಗೊಳಿಸಲಾಗುತ್ತದೆ. ಕಣ್ಣು ತೆರೆದರೂ ಸ್ವಲ್ಪವೇನಾದರೂ ನಿದ್ರೆಯ ನಶೆಯಿರುವ ಕಾರಣದಿಂದ, ಈ ಪ್ರಶ್ನೆಯನ್ನು ಮಾಡುತ್ತಾರೆ - ಇವರು ಯಾರಾಗಿದ್ದಾರೆ? ಇದೇನಾಗಿದೆ? ಎಂದು ದೆಹಲಿ ನಿವಾಸಿ ಅಜ್ಞಾನಿ ಆತ್ಮರಿಗೂ ಸಹ ಅವಶ್ಯವಾಗಿ ಪ್ರಶ್ನೆಯು ಉದ್ಭವಿಸಿದೆಯೇ? ಇವರು ಯಾರಾಗಿದ್ದಾರೆ, ಇದು ಏನಾಗಿದೆ? ಕೇಳುವ ಮತ್ತು ನೋಡುವುದರಲ್ಲಿ ಅಂತರದ ಅನುಭವ ಮಾಡಿದರು. ಎಲ್ಲರ ದೃಷ್ಟಿಯು ಬ್ರಾಹ್ಮಣರನ್ನು ನೋಡಿ ಖಂಡಿತವಾಗಿಯೂ ಇಷ್ಟಂತು ಅನುಭವ ಮಾಡುತ್ತಾರೆ. ಚಮತ್ಕಾರವಾಗಿದೆ. ಇನ್ನೂ ಸೇನೆಯನ್ನು ಸಾಧಾರಣ ಕನ್ಯೆಯರು, ಮಾತೆಯರು ಗುಪ್ತವಾಗಿಯೇ ತಯಾರು ಮಾಡಿಬಿಟ್ಟಿದ್ದಾರೆ. ಈ ರೀತಿ ಎಂದೂ ಸಹ ಯೋಚಿಸಿರಲಿಲ್ಲ, ತಿಳಿದೂ ಇರಲಿಲ್ಲ. ಬಾಪ್‌ದಾದಾರವರ ಮೂರ್ತಿಯನ್ನು ಎಲ್ಲರ ದಿವ್ಯ ಚಹರೆಯು ತಮ್ಮ ಕರ್ತವ್ಯದ ಮೂಲಕ ಅವಶ್ಯವಾಗಿ ಜನರಮುಂದೆ ಪ್ರತ್ಯಕ್ಷ ಮಾಡಿತು. ಈಗ ಕೇವಲ ಹಲ್-ಚಲ್ ಹರಡಿದ್ದಾರೆ. ಹೇಗೆ ಧರಣಿಯಲ್ಲಿ ಮೊಟ್ಟಮೊದಲನೆಯದಾಗಿ ನೇಗಿಲೂಡುತ್ತಾರೆ ಅಲ್ಲವೆ ಮತ್ತು ನೇಗಿಲೂಡುತ್ತಾ ಬೀಜವನ್ನು ಹಾಕುತ್ತಾರೆ, ಹಾಗೆಯೇ ತಮ್ಮ ಭವಿಷ್ಯ ರಾಜಧಾನಿಯಲ್ಲಿ ಅಥವಾ ತಮ್ಮ ಆದಿ ಧರಣಿಯಲ್ಲಿ ಹಲ್-ಚಲ್ ಎನ್ನುವ ಹಲ್ (ನೇಗಿಲೂಡುವುದು) ಮಾಡಲಾಯಿತು ಹೇಗೆಂದರೆ ಇದರಲ್ಲಿ ಏನೋ ಶಕ್ತಿಯಿದೆ, ಯಾವುದೋ ತಾಕತ್ತಿದೆ. ಸಾಧಾರಣ ವ್ಯಕ್ತಿಗಳಲ್ಲ, ಹಲ್‌ಚಲ್‌ನ ಜೊತೆ ಈ ಬೀಜವನ್ನು ಹಾಕಿದ್ದಾರೆ. ಸನ್ಮುಖದಲ್ಲಿ ನೋಡದಿದ್ದರೂ ಸಹ ನಾಲ್ಕೂಕಡೆಯಲ್ಲಿ ಈ ಧ್ವನಿ ಮೊಳಗಿದೆ ಇವರು ಯಾರು ಮತ್ತು ಏನಾಗಿದ್ದಾರೆ? ಈ ಶಬ್ದವು ಸರ್ಕಾರದ ಕಿವಿಯವರೆಗೂ ತಲುಪಿದೆ. ಈಗ ಈ ಬೀಜವನ್ನು ವಾಣಿಯ ಮೂಲಕ ಮತ್ತು ಸ್ಮೃತಿಯಶಕ್ತಿಯ ಮೂಲಕ ಫಲೀಭೂತ ಮಾಡಬೇಕಾಗಿದೆ. ಆದರೆ ಈಗಿನವರೆಗೂ ಏನನ್ನು ಮಾಡಿರುವಿರೋ, ಅದನ್ನು ಬಹಳ ಚೆನ್ನಾಗಿ ಮಾಡಲಾಗಿದೆ.

ವಿದೇಶದಿಂದ ಬಂದಿರುವ ಮಕ್ಕಳನ್ನು ಅಥವಾ ಭಾರತದಿಂದ ಬಂದಿರುವ ಮಕ್ಕಳನ್ನು, ಯಾರೆಲ್ಲರೂ ಸೇವೆಯಲ್ಲಿ ಬೆರಳನ್ನು ಕೊಟ್ಟಿದ್ದಾರೆ ಅರ್ಥಾತ್ ತಮ್ಮ ರಾಜ್ಯ ಬುನಾದಿಯನ್ನು ಹಾಕಿದ್ದಾರೆಯೋ ಅವರನ್ನು ಬಾಪ್‌ದಾದಾರವರು ನೋಡಿ ಹರ್ಷಿತವಾಗುತ್ತಿದ್ದಾರೆ. ಈ ಸಮ್ಮೇಳನವು ಬ್ರಾಹ್ಮಣರು ತಮ್ಮ-ತಮ್ಮ ರಾಜಧಾನಿಯ ಅಧಿಕಾರಿಯಾಗುವ ಫೌಂಡೇಶನ್ ಸ್ಟೋನ್ ಹಾಕುವ ಸಮಾರೋಹವಾಗಿತ್ತು. ಆದ್ದರಿಂದ ಯಾವುದೇ ವಿದೇಶದ ಸೇವಾಕೇಂದ್ರದ ಆತ್ಮರು ಅಥವಾ ಭಾರತದಲ್ಲಿಯೂ ಯಾವುದೇ ಜೋನ್ ಉಳಿದುಕೊಂಡಿಲ್ಲ. ಮಾಡಿರುವ ಈ ಗುಪ್ತಸೇವೆಯು ಸ್ವಲ್ಪಸಮಯದಲ್ಲಿ ಪ್ರತ್ಯಕ್ಷರೂಪವಾಗಿ ಕಾಣಿಸುತ್ತದೆ. ಈಗಂತೂ ಗುಪ್ತವೇಶದಲ್ಲಿ ತಮ್ಮ ಫೌಂಡೇಷನ್ ಸ್ಟೋನ್ ಹಾಕಲಾಗಿದೆ ಅರ್ಥಾತ್ ಬೀಜವನ್ನು ಬಿತ್ತನೆ ಮಾಡಲಾಗಿದೆ ಆದರೆ ತಾವೆಲ್ಲರೂ ಸಮಯದನುಸಾರವಾಗಿ ಇದೇ ಬೀಜದ ಫಲದ ರೂಪದಲ್ಲಿ ನೋಡುತ್ತೀರಿ. ಇದೇ ಪ್ರಪಂಚದ ಜನರು ತಮ್ಮನ್ನು ಆಹ್ವಾನ ಮಾಡುವರು. (ಎಲ್ಲರಿಂದ ಕೆಮ್ಮಿನ ಶಬ್ದವಾಯಿತು) ಬಹಳ ಪರಿಶ್ರಮಪಟ್ಟಿದ್ದೀರಾ? ಪ್ರಕೃತಿಯ ಪ್ರಭಾವವು ಹೆಚ್ಚಾಗಿಬಿಟ್ಟಿದೆ, ಇದರ ಫಲವೂ ಸಿಗುತ್ತದೆ. ಇದರ ಅನುಭವವನ್ನು ಮಾಡುವುದೂ ಸಹ ವಿದೇಶಿ ಆತ್ಮರಿಗೆ ಅವಶ್ಯಕತೆಯಿದೆ- ಎಂತಹ ಸೀಜನ್ ಇರುತ್ತದೆಯೋ ಅದೇರೀತಿ ತಮ್ಮನ್ನು ನಡೆಸಲು ಸಾಧ್ಯವಾಗಬೇಕು. ಇದರ ಅನುಭವವೂ ಇರಬೇಕು. ಈ ಸೇವೆಯಲ್ಲಿ ಪ್ರತಿಯೊಬ್ಬರೂ ಕಿರಿಯರು-ಹಿರಿಯರೆಲ್ಲರೂ ಮಹತ್ವವುಳ್ಳವರಾಗಿದ್ದರು. ಬಹಳಚೆನ್ನಾಗಿ ಪರಿಶ್ರಮಪಟ್ಟಿದ್ದೀರಿ, ಮೊದಲ ಫೌಂಡೇಷನ್- ಈ ಪ್ರಶ್ನೆಯು ಉದ್ಭವಿಸಿತು.ಈಗ ಮತ್ತೊಮ್ಮೆ ಆ ಪ್ರಶ್ನೆಯ ಉತ್ತರವು ಸಿಗುತ್ತದೆ. ಇಂದು ಬಾಪ್‌ದಾದಾರವರು ಈ ಆತ್ಮಿಕ ವಾರ್ತಾಲಾಪ ಮಾಡುತ್ತಿದ್ದರು. ಬಾಬಾರವರ ಮೂಲಕ ಮುಂದಕ್ಕಾಗಿಯೂ ಸಹ ನಿರಂತರ ಯೋಗಿಯ ವರದಾನವು ಪ್ರಾಪ್ತಿಯಾಯಿತು, ಹಾಗೆಯೇ ನಿರಂತರ ಸೇವಾಧಾರಿ, ಮಲಗುತ್ತಾ

ಸೇವೆಯಿರಲಿ. ಮಲಗಿದ್ದಾಗಲೂ ಯಾರಾದರೂ ನೋಡಿದರೆ, ತಮ್ಮ ಚಹರೆಯಿಂದ ಶಾಂತಿ, ಆನಂದದ ಪ್ರಕಂಪನದ ಅನುಭವ ಮಾಡಲಿ ಆದ್ದರಿಂದ ಹೇಳಲಾಗುತ್ತದೆ- ಬಹಳ ಮಧುರನಿದ್ರೆಯಿತ್ತು. ನಿದ್ರೆಯಲ್ಲಿಯೂ ಸಹ ಅಂತರವಾಗುತ್ತದೆ. ಪ್ರತಿಯೊಂದು ಸಂಕಲ್ಪದಲ್ಲಿ, ಪ್ರತೀ ಕರ್ಮದಲ್ಲಿಯೂ ಸದಾ ಸೇವೆಯು ಸಮಾವೇಶವಾಗಿರಲಿ- ಇದಕ್ಕೆ ನಿರಂತರ ಸೇವಾದಾರಿ ಎಂದು ಹೇಳಲಾಗುತ್ತದೆ. ತಂದೆ ಮತ್ತು ಸೇವೆ. ಹೇಗೆ ತಂದೆಯು ಅತಿಪ್ರಿಯವೆನಿಸುತ್ತಾರೆ- ತಂದೆಯಿಲ್ಲದೆ ಜೀವನವಿಲ್ಲ, ಹಾಗೆಯೇ ಸೇವೆಯಿಲ್ಲದೆ ಜೀವನವಿಲ್ಲ. ಇಂತಹ ನಿರಂತರಯೋಗಿ ಮತ್ತು ನಿರಂತರ ಸೇವಾದಾರಿಯು ಸದಾ ವಿಘ್ನ ವಿನಾಶಕನಾಗಿರುತ್ತಾರೆ. ತಂದೆಯ ನೆನಪು ಮತ್ತು ಸೇವೆ. ಈ ಡಬಲ್ ಲಾಕ್ ಹಾಕಲ್ಪಡುತ್ತದೆ ಆದ್ದರಿಂದ ಮಾಯೆಯು ಬರಲು ಸಾಧ್ಯವಿಲ್ಲ. ಪರಿಶೀಲನೆ ಮಾಡಿರಿ- ಸದಾ ಡಬಲ್‌ಲಾಕ್ ಇರುತ್ತದೆಯೇ? ಒಂದು ವೇಳೆ ಸಿಂಗಲ್ ಲಾಕ್ ಹಾಕಲಾಗಿದೆಯೆಂದರೆ ಮಾಯೆಯು ಬರುವುದಕ್ಕೆ ಅವಕಾಶವಿರುತ್ತದೆ. ಆದ್ದರಿಂದ ಮತ್ತೆ-ಮತ್ತೆ ಗಮನಕೊಡಿ- ತಂದೆಯ ನೆನಪು ಮತ್ತು ಸೇವೆಯಲ್ಲಿ ತತ್ಪರನಾಗಿದ್ದೇನೆಯೇ? ಸದಾ ಇದನ್ನು ನೆನಪಿಡಿ- ಸರ್ವ ಕರ್ಮೇಂದ್ರಿಯಗಳ ಮೂಲಕ ತಂದೆಯ ನೆನಪಿನ ಸ್ಮೃತಿಯನ್ನು ಕೊಡುವ ಸೇವೆಯನ್ನು ಮಾಡುತ್ತಿರುತ್ತೀರಾ? ಪ್ರತೀ ಸಂಕಲ್ಪದ ಮೂಲಕ ವಿಶ್ವಕಲ್ಯಾಣ ಅರ್ಥಾತ್ ಲೈಟ್ ಹೌಸ್‌ನ ಕರ್ತವ್ಯ ಆಗುತ್ತಿರುತ್ತದೆಯೇ? ನಾಲ್ಕೂಕಡೆಯಲ್ಲಿ ಪ್ರತೀ ಸೆಕೆಂಡಿನ ಶಕ್ತಿಶಾಲಿ ವೃತ್ತಿಯ ಮೂಲಕ ಶಕ್ತಿಶಾಲಿ ಪ್ರಕಂಪನಗಳನ್ನು ಹರಡುತ್ತಿರುತ್ತೀರಿ ಅರ್ಥಾತ್ ವಾಯುಮಂಡಲವನ್ನು ಪರಿವರ್ತನೆ ಮಾಡುತ್ತಿರುತ್ತೀರಿ. ಪ್ರತೀ ಕರ್ಮದ ಮೂಲಕ ಆತ್ಮನಿಗೆ ಕರ್ಮಯೋಗಿ ಭವದ ವರದಾನವನ್ನು ಕೊಡುತ್ತಿರುತ್ತೀರಾ? ಪ್ರತೀ ಹೆಜ್ಜೆಯಲ್ಲಿ ಸ್ವಯಂನ ಪ್ರತಿ ಪದಮಗಳ ಸಂಪಾದನೆಯನ್ನು ಜಮಾ ಮಾಡಿಕೊಳ್ಳುತ್ತಿರುತ್ತೀರಾ? ಅಂದಮೇಲೆ ಸಂಕಲ್ಪ, ಸಮಯ, ವೃತ್ತಿ ಮತ್ತು ಕರ್ಮ- ಈ ನಾಲ್ಕನ್ನೂ ಸೇವೆಗಾಗಿ ತೊಡಿಸಬೇಕು. ಇದಕ್ಕೆ ಹೇಳಲಾಗುತ್ತದೆ – ನಿರಂತರ ಸೇವಾದಾರಿ ಅರ್ಥಾತ್ ಸರ್ವೀಸೇಬಲ್. ಒಳ್ಳೆಯದು.

ಹೇಗೆ ಮಧುಬನದಲ್ಲಿ ಮೇಳವಾಗುತ್ತದೆಯೋ ಹಾಗೆಯೇ ಅಂತ್ಯದಲ್ಲಿಯೂ ಆತ್ಮರ ಮೇಳವೂ ಆಗುವುದಿದೆ. ಮಧುಬನವು ಪ್ರಿಯವೆನಿಸುತ್ತದೆಯೇ ಅಥವಾ ವಿದೇಶವು ಪ್ರಿಯವೆನಿಸುತ್ತದೆಯೇ. ಮಧುಬನವೆಂದು ಯಾವುದಕ್ಕೆ ಹೇಳಲಾಗುತ್ತದೆ? ಎಲ್ಲಿ ಬ್ರಾಹ್ಮಣರ ಸಂಘಟನೆಯಿರುತ್ತದೆಯೋ ಅದು ಮಧುಬನವಾಗಿದೆ ಅಂದಮೇಲೆ ಪ್ರತಿಯೊಂದು ವಿದೇಶದ ಸ್ಥಾನವನ್ನು ಮಧುಬನವನ್ನಾಗಿ ಮಾಡಿರಿ. ಮಧುಬನವನ್ನಾಗಿ ಮಾಡುತ್ತೀರೆಂದರೆ ಬಾಪ್‌ದಾದಾರವರೂ ಬರುತ್ತಾರೆ ಏಕೆಂದರೆ ತಂದೆಯ ಪ್ರತಿಜ್ಞೆಯಿದೆ- ಮಧುಬನದಲ್ಲಿ ಬರಬೇಕು. ಅಂದಾಗ ಎಲ್ಲಿ ಮಧುಬನವೋ ಅಲ್ಲಿ ಬಾಪ್‌ದಾದಾ, ಮುಂದೆ ನಡೆದಂತೆ ಬಹಳ ಅದ್ಭುತಗಳನ್ನು ನೋಡುತ್ತೀರಿ. ಈಗ ಭಾರತದ ಸಂಖ್ಯೆಯು ಹೇಗೆ ಹೆಚ್ಚಾಗುತ್ತದೆಯೋ ಹಾಗೆಯೇ ಸ್ವಲ್ಪ ಸಮಯದಲ್ಲಿ ವಿದೇಶದ ಸಂಖ್ಯೆಯನ್ನೂ ಹೆಚ್ಚಿಸಿ, ಎಲ್ಲಿರುತ್ತೀರೋ ಅಲ್ಲಿ ನಾಲ್ಕೂಕಡೆಯಲ್ಲಿ ಶಬ್ದವು ಹರಡಲಿ, ಇವರು ಯಾರು ಮತ್ತು ಇದು ಏನು ಎಂದು ಪ್ರಶ್ನೆಯು ಉದ್ಭವಿಸುತ್ತದೆ. ಇಂತಹ ಸಂಘಟನೆಯು ತಯಾರು ಮಾಡಿರಿ, ಆಗ ಎಲ್ಲಿ ಸಂಘಟನೆಯಿರುತ್ತದೆಯೋ ಅಲ್ಲಿ ಬಾಪ್‌ದಾದಾರವರೂ ಸಹ ಹಾಜರಾಗುತ್ತಾರೆ.

ಎಲ್ಲಿ ಇದ್ದರೂ ಖುಷಿ(ಸಂತೋಷ)ಯಾಗುತ್ತದೆಯೋ ಅಥವಾ ಇಲ್ಲಿ ಬಂದಾಗ ಮಾತ್ರ ಖುಷಿಯಾಗುತ್ತದೆಯೇ. ಏಷ್ಟಾದರೂ ಹೇಳಿರಿ, ಆದರೂ ಸಹ ಹಿರಿಯರು ಹಿರಿಯರಾಗಿದ್ದಾರೆ, ಕಿರಿಯರು ಕಿರಿಯರಾಗಿದ್ದಾರೆ. ಏಕೆಂದರೆ ಡೈರೆಕ್ಟ್ ಸಾಕಾರ ತನುವಿನ ಜನ್ಮಭೂಮಿ ಮತ್ತು ಕರ್ಮಭೂಮಿ, ಚರಿತ್ರೆಯ ಭೂಮಿಯ ವಿಶೇಷವಾದ ಮಹತ್ತಿಕೆಯಂತು ಇದ್ದೇ ಇದೆ. ಆದ್ದರಿಂದ ಭಕ್ತಿಯಲ್ಲಿಯೂ ಸಹ ಏನೂ ಇರದಿದ್ದರೂ, ಸ್ಥಾನದ ಮಹತ್ವವಿದೆ. ಮೂರ್ತಿಯು ಹಳೆಯದಾಗಿರುತ್ತದೆ ಮತ್ತು ಮನೆಯಲ್ಲಿ ಬಹಳ ಚೆನ್ನಾಗಿರುವ ಸುಂದರ ಮೂರ್ತಿಯಿರುತ್ತದೆ, ಆದರೂ ಸಹ ಸ್ಥಾನಕ್ಕೆಮಹತ್ವಿಕೆಯನ್ನು ಕೊಡುತ್ತಾರೆ. ಅಂದಮೇಲೆ ಸ್ಥಾನದ ಮಹತ್ವವಿದೆ ಆದರೆ ತಮ್ಮ ಹೂಗುಚ್ಛವನ್ನು ದೊಡ್ಡದಾಗಿ ಮಾಡಿರಿ. ಮಧುಬನದಂತಹ ನಕ್ಷೆಯನ್ನು ಮಾಡಿರಿ. ಮಿನಿ ಮಧುಬನವೂ ತಯಾರಾದಾಗ ನೋಡುವುದಕ್ಕಾಗಿ ಎಲ್ಲರಿಗೂ ಆಕರ್ಷಣೆಯಾಗುತ್ತದೆ. ಒಳ್ಳೆಯದು-

ಬಾಪ್‌ದಾದಾರವರು ವರ್ತಮಾನ ಸೇವೆಗಾಗಿ, ಧನ್ಯವಾದಗಳನ್ನು ಕೊಡುತ್ತಾರೆ ಮತ್ತು ಭವಿಷ್ಯದ ಸೇವೆಗಾಗಿ ಪುನಃ ಸ್ಮೃತಿಯನ್ನು ತರಿಸುತ್ತಿದ್ದಾರೆ. ಬಾಪ್‌ದಾದಾರವರಿಗೆ ಮಕ್ಕಳೊಂದಿಗೆ ಬಹಳ ಸ್ನೇಹವೆಂದು ಹೇಳಿ ಅಥವಾ ಶುಭಮಮತೆಯೆಂದು ಹೇಳಿ, ತಾಯಿಗೆ ಮಕ್ಕಳಲ್ಲಿ ಮಮತೆ ಇರುತ್ತದೆಯಲ್ಲವೆ, ಚಡಪಡಿಸುವುದಿಲ್ಲ ಆದರೆ ಸಮಾವೇಶವಾಗುತ್ತಾರೆ. ಉದಾಸರಾಗುವುದಿಲ್ಲ. ಆದರೆ ಮಕ್ಕಳನ್ನು ಸನ್ಮುಖದಲ್ಲಿ ಇಮರ್ಜ್ ಮಾಡಿಕೊಳ್ಳುತ್ತಾ ಸ್ನೇಹದ ಸಾಗರನಲ್ಲಿ ಸಮಾವೇಶವಾಗಿಬಿಡುತ್ತಾರೆ. ತಂದೆಯ ಸ್ನೇಹವಿದೆ, ಆದ್ದರಿಂದ ತಮಗೂ ಸ್ನೇಹವು ಉತ್ಪನ್ನ ಆಗುತ್ತದೆಯಲ್ಲವೆ. ಸ್ನೇಹವಿದೆ ಆದ್ದರಿಂದಲೇ ಅವ್ಯಕ್ತದಿಂದ ವ್ಯಕ್ತದಲ್ಲಿ ಬರುತ್ತಾರೆ.

**ಇಂತಹ ಸ್ನೇಹದ ಬಂಧನದಲ್ಲಿ ಬಂಧಿಸಿರುವಂತಹ, ಸ್ನೇಹದಿಂದ ತಂದೆಯನ್ನು ಪ್ರತ್ಯಕ್ಷ ಮಾಡುವಂತಹ, ಸೇವೆಯ ಮೂಲಕ ವಿಶ್ವದ ಕಲ್ಯಾಣಾರ್ಥವಾಗಿ ನಿಮಿತ್ತರಾಗಿರುವ, ಸದಾ ಮಹಾದಾನಿ ಮತ್ತು ವರದಾನಿ, ಇಂತಹ ನಿರಂತರ ಯೋಗಿ, ನಿರಂತರ ಸೇವಾದಾರಿ ಮಕ್ಕಳಿಗೆ ಬಾಪ್‌ದಾದಾರವರ ನೆನಪು, ಪ್ರೀತಿ ಹಾಗೂ ನಮಸ್ತೆ.**

ಅವ್ಯಕ್ತ ಮುರಳಿ 24-01-1978.

***ನಿರಂತರ ಸೇವಾಧಾರಿ.***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಪ್ರೇಮ ಸ್ವರೂಪ, ಶಿವಪರಮಾತ್ಮ ನನ್ನ ತಂದೆ.

1. ನಾನು ಮಸ್ತಕದ ಮಧ್ಯದಲ್ಲಿ ಹೊಳೆಯುವ ನಕ್ಷತ್ರ.

2. ನಾನು ನನ್ನ ಮುಖದಲ್ಲಿ, ನಯನಗಳಲ್ಲಿ, ಬುದ್ಧಿಯಲ್ಲಿ, ತಂದೆಯನ್ನು ಸಮಾವೇಶಗೊಳಿಸಿಕೊಂಡು ತಂದೆಯನ್ನು ಕೊರಳಿನ ಹಾರವನ್ನಾಗಿ ಮಾಡಿಕೊಂಡಿದ್ದೇನೆ.

3. ನಾನು 'ತಂದೆಯನ್ನು ಪ್ರತ್ಯಕ್ಷ ಮಾಡುವ ಶ್ರೇಷ್ಠ ಮಗು' ಎಂಬ ನಶೆ ಮತ್ತು ಸೇವೆಯ ಸ್ಮೃತಿಯನ್ನು ಅವಿನಾಶಿಯಾಗಿ ಮಾಡಿಕೊಂಡಿದ್ದೇನೆ.

4. ನನ್ನ ದಿವ್ಯಚಹರೆ ಮತ್ತು ಕರ್ತವ್ಯದಿಂದ ಬಾಪ್‌ದಾದಾರವರನ್ನು ಪ್ರಜೆಗಳ ಮುಂದೆ ಪ್ರತ್ಯಕ್ಷ ಮಾಡಿದ್ದೇನೆ.

5. ನಾನು ತಂದೆಯ ಪ್ರತ್ಯಕ್ಷತೆಯ ಧ್ವನಿಯ ಬೀಜವನ್ನು ವಾಣಿಯಿಂದ, ಸ್ಮೃತಿಯಶಕ್ತಿಯಿಂದ ಫಲೀಭೂತ ಮಾಡಿದ್ದೇನೆ.

6. ನಾನು ತಂದೆಯಿಂದ ನಿರಂತರ ಯೋಗಿ ಭವ!, ನಿರಂತರ ಸೇವಾಧಾರಿ ಭವ! ಎಂಬ ವರದಾನಗಳನ್ನು ಸ್ವೀಕರಿಸಿದ್ದೇನೆ.

7. ನಾನು ಮಲಗಿರುವವಾಗಲೂ ನನ್ನ ಮುಖದಿಂದ ಶಾಂತಿ, ಆನಂದದ ಪ್ರಕಂಪನಗಳನ್ನು ವಿಶ್ವಾತ್ಮರು ಅನುಭವ ಮಾಡಿಕೊಂಡಿದ್ದಾರೆ.

8. ನಾನು ಪ್ರತಿ ಸಂಕಲ್ಪ, ಪ್ರತಿ ಕರ್ಮದಲ್ಲಿ, ಮಲಗಿದ್ದಾಗಲೂ ಸೇವೆಯನ್ನು ಮಾಡುವ ನಿರಂತರ ಸೇವಾಧಾರಿ ಮತ್ತು ಸದಾ ವಿಘ್ನ ವಿನಾಶಕನು.

9. ನಾನು ಸದಾ ಸರ್ವಕರ್ಮೇಂದ್ರಿಯಗಳಿಂದ ತಂದೆಯ ನೆನಪಿನ ಸ್ಮೃತಿಯನ್ನು ಕೊಡಿಸುತ್ತಾ, ಪ್ರತಿ ಸಂಕಲ್ಪದಿಂದ ವಿಶ್ವಕಲ್ಯಾಣದ ಕರ್ತವ್ಯವನ್ನು ಮಾಡುತ್ತಾ, ಶಕ್ತಿಶಾಲಿ ವೃತ್ತಿಯಿಂದ ಪ್ರತಿಕ್ಷಣ ನಾಲ್ಕು ಕಡೆ ಶಕ್ತಿಶಾಲಿ ಪ್ರಕಂಪನಗಳನ್ನು ವ್ಯಾಪಿಸುತ್ತಾ ಪ್ರತೀಕರ್ಮದಿಂದ ಆತ್ಮರೆಲ್ಲರಿಗೂ 'ಕರ್ಮಯೋಗಿ ಭವ!' ಎಂಬ ವರದಾನವನ್ನು ಕೊಡುತ್ತಾ, ಪ್ರತಿ ಹೆಜ್ಜೆಯಲ್ಲಿ ಪದಮಾಪದಂ ಸಂಪಾದನೆಯನ್ನು ಮಾಡಿಕೊಂಡಿರುವ ನಿರಂತರ ಸೇವಾಧಾರಿ.